**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**

**ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್** *48/2014*

ದಿನಾಂಕಃ *07.06.2023*
*(ಸಾಕ್ಷಿಗೆ ಪ್ರಮಾಣ* **ಮಾಡಿಸಲಾಯಿತು.)**

**ಪ್ರಾ.ಸಾಃ** *11* **(ಚಾ.ಸಾ** *9* **)**

| | | |
|---|---|---|
| ಹೆಸರು | ಃ | ಡಾಃ ನಟೇಶ್ ಡಿ ಬಿ |
| ತಂದೆಯ ಹೆಸರು | ಃ | ಬಸವರಾಜಪ್ಪ |
| ವಯಸ್ಸು | ಃ | *48* ವರ್ಷ |
| ಉದ್ಯೋಗ | ಃ | ಕೆ ಎ ಎಸ್ ಹಿರಿಯ ಶ್ರೇಣಿ ಅಧಿಕಾರಿ |
| ವಾಸ ಸ್ಥಳ | ಃ | **ಬೆಂಗಳೂರು** |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಅಕ್ಟೋಬರ್ *2009* ರಿಂದ ಮೇ *2011* ರವರೆಗೆ ರಾಮನಗರದಲ್ಲಿ ತಹಸಿಲ್ದಾರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

*2.* ಡಿ ವೈ ಎಸ್ ಪಿ ಕರ್ನಾಟಕ ಲೋಕಾಯುಕ್ತ ರಾಮನಗರ ದಿ.*11.08.2010* ರಂದು ಪತ್ರ ಬರೆದು ಆರೋಪಿ *1* ಮತ್ತು *2* ಇವರ ಸೇವಾ ವಿವರಗಳ ಬಗ್ಗೆ ಮಾಹಿತಿ ಕೇಳಿದರು. ದಿ.*12.08.2010* ರಂದು ಆರೋಪಿ ಹರ್ಷ ಇವರಿಗೆ ಸಂಬಂಧಪಟ್ಟ ಮಾಹಿತಿ ದಿ.*18.08.2010* ರಂದು ಆರೋಪಿ ಮೋಹನ್ ಕುಮಾರ್ ಇವರಿಗೆ ಸಂಬಂಧಪಟ್ಟ ಮಾಹಿತಿಯನ್ನು ಪತ್ರದ ಮುಖಾಂತರ ಡಿ ವೈ ಎಸ್ ಪಿ ರಾಮನಗರ ಇವರಿಗೆ ಕಳುಹಿಸಿರುತ್ತೇನೆ. ಸಾಕ್ಷಿ ಗುರುತಿಸಿದ ದಾಖಲೆಗಳನ್ನು ನಿಪಿ-*43* ಮತ್ತು ನಿಪಿ-*44* ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-*43* ಎ ಮತ್ತು ನಿಪಿ-*44* ಎ ಎಂದು ಗುರುತಿಸಲಾಯಿತು.

*3.* *1* ನೇ ಅರೋಪಿ ಹರ್ಷ ನಮ್ಮ ಕಛೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದನು. *2* ನೇ ಆರೋಪಿ ಮೋಹನ್ ಕುಮಾರ್

ನಮ್ಮ ಕಛೇರಿಯ ಭೂಮಿ ಶಾಖೆಯಲ್ಲಿ ಗ್ರಾಮಲೆಕ್ಕಾಧಿಕಾರಿಯಾಗಿ ಕಂಪ್ಯೂಟರ್ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಸದರಿ ಆರೋಪಿತರು ಇವತ್ತು ನ್ಯಾಯಾಲಯದಲ್ಲಿ ಇರುತ್ತಾರೆ. *1* ನೇ ಆರೋಪಿ ಹರ್ಷ ದಿ.*06.08.2010* ರಂದು ಅಪರಾಹ್ನದಿಂದ ಗೈರುಹಾಜರಾಗಿರುತ್ತಾರೆ. ಅಚ್ಚಲು ಗ್ರಾಮದ ಜಮೀನಿಗೆ ಸಂಬಂಧಿಸಿದಂತೆ ಖಾತಾ ವರ್ಗಾವಣೆಗಾಗಿ ಒಬ್ಬರು ಅರ್ಜಿ ಕೊಟ್ಟಿದ್ದರು ಅರ್ಜಿ ಆಧಾರದ ಮೇಲೆ ಭೂ ತಂತ್ರಾಂಶದಲ್ಲಿ ಅಳವಡಿಸಿಕೊಳ್ಳಲಾಗಿತ್ತು. ಅದನ್ನ ನಾನು ಅನುಮೋಧನೆ ಮಾಡಬೇಕಾಗಿತ್ತು ಸದರಿ ಜಮೀನು ಆಂಜನೇಯ ದೇವಸ್ಥಾನದ ಭೂಮಿ ಆಗಿದ್ದು, ಅದು ಅರ್ಜಿದಾರರ ಪೂರ್ವಿಕರಿಗೆ ಮಂಜೂರಾತಿ ಆಗಿದೆ ಎಂದು ಎಂಡಾರ್ಜಮೆಂಟ್ ಹಾಜರುಪಡಿಸಿ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಲಾಗಿತ್ತು. ಗ್ರಾಂಡ್ ಆರ್ಡರ್ ಇರಲಿಲ್ಲ ಹಾಗಾಗಿ ಅದನ್ನು ಪರಿಶೀಲಿಸಬೇಕಾಗಿತ್ತು. ಮೂಲ ಮಂಜೂರಾತಿ ದಾಖಲೆಯನ್ನು ಪರಿಶೀಲನೆ ಮಾಡಬೇಕು ಎಂದು ಷರಾ ಬರೆದು ಅದನ್ನು ತಿರಸ್ಕರಿಸಿದ್ದೆ.

*4.* ಈ ಕೇಸಿನಲ್ಲಿ ಖಾತಾ ಮಾಡಿಸಿಕೊಡುತ್ತೇವೆ ಎಂದು ಆರೋಪಿತರು ಅರ್ಜಿದಾರರಿಂದ ಹಣ ಕೇಳಿದ್ದಾರೆ ಎಂದು ಟ್ರಾಪ್ ಮಾಡಲಾಗಿದೆ ಎಂದು ಗೊತ್ತಾಯಿತು. ಈ ಸಂಬಂಧವಾಗಿ ಲೋಕಾಯುಕ್ತ ಅಧಿಕಾರಿಗಳು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎಂ ವಕೀಲರಿಂದಃ**

***2.*** ಖಾತಾ ಬದಲಾವಣೆಗಾಗಿ ಅರ್ಜಿ ಸಲ್ಲಿಸಿದಾಗ ಗ್ರಾಮಲೆಕ್ಕಾಧಿಕಾರಿ ಭೂಮಿ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಲಾಗುತ್ತದೆ. ಸಂಬಂಧಪಟ್ಟ ಎಲ್ಲಾ ಅರ್ಜಿಗಳು ತಹಸಿಲ್ದಾರ್ ಲಾಗಿನ್ ಗೆ ವರ್ಗಾವಣೆ ಆಗುತ್ತವೆ. ತಹಸಿಲ್ದಾರ್ ರವರು ಪರಿಶೀಲನೆ ಮಾಡಿ ಅನುಮೋಧನೆ ಮಾಡಿದರೆ ಖಾತಾ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಸದರಿ ಅರ್ಜಿಗಳು ಖಾತಾ ವರ್ಗಾವಣೆಗಾಗಿ ಅರ್ಹವಾಗಿದೆಯೋ ಇಲ್ಲವೋ ಎಂದು ಷರಾ ಬರೆದು ಅರ್ಹವಿದ್ದಲ್ಲಿ ಅನುಮೋಧನೆ ಮಾಡುತ್ತೇವೆ ಇಲ್ಲದಿದ್ದಲ್ಲಿ ತಿರಸ್ಕರಿಸುತ್ತೇವೆ.

*3.* ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂಲ ದಾಖಲಾತಿಗಳನ್ನು ಅರ್ಜಿದಾರರು ಲಗತ್ತಿಸಿರಲಿಲ್ಲ ಅಂದರೆ ಸರಿ. ಖಾತಾ ವರ್ಗಾವಣೆಗೆ ತಿರಸ್ಕರಿಸಿದ ನಂತರ ಮೂಲ ದಾಖಲಾತಿಗಳು ಆರ್ಜಿದಾರರು ಹಾಜರುಪಡಿಸಿದರೆ ಆರ್ಜಿಯನ್ನು ಪುನರ್ ಪರಿಶೀಲಿಸಲು ಅವಕಾಶವಿರುತ್ತದೆ. ನನ್ನ ಮುಂದೆ ಅರ್ಜಿದಾರರು ಮೂಲ ಮಂಜುರಾತಿ ಮತ್ತು ವಂಶವೃಕ್ಷ ಹಾಜರುಪಡಿಸಿಲ್ಲ ಅಂದರೆ ಸರಿ. ಟ್ರಾಪ್ ಪ್ರಕ್ರಿಯೆ ಮುಗಿದ ಮೇಲೆ ಒಂದುವಾರ ಕಳೆದ ಮೇಲೆ ನಾವು ಕೇಳಿದಂತಹ ದಾಖಲೆಗಳನ್ನು ಆರ್ಜಿದಾರರು ಹಾಜರುಪಡಿಸಿದ್ದು ನಂತರ ಖಾತಾ ವರ್ಗಾವಣೆ ಆಗಿದೆ.

*4. 1* ನೇ ಆರೋಪಿ ಹರ್ಷ ಮಾಡುತ್ತಿದ್ದ ಬ್ರಾಂಚ್ ಗೆ ಖಾತಾ ವರ್ಗಾವಣೆ ಮಾಡುವ ವಿಷಯ ಬರುವುದಿಲ್ಲ ಮತ್ತು ಅವರಿಗೆ ಸಂಬಂಧಿಸಿದ ವಿಷಯವಲ್ಲ.

*5. 2* ನೇ ಆರೋಪಿ ಮೋಹನ್ ಕುಮಾರ್ ಅಪರೇಟರ್ ಅಂತ ಕೆಲಸಮಾಡುತ್ತಿದ್ದ. ಸಾರ್ವಜನಿಕರಿಂದ ಸ್ವೀಕೃತಗೊಂಡ ಅರ್ಜಿಗಳನ್ನು ಭೂಮಿ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವುದು ಅವನ ಕೆಲಸ. ಅದು ಹೊರತುಪಡಿಸಿ ಅವನಿಗೆ ಬೇರೆಯಾವುದೇ ಕೆಲಸ ಇರಲಿಲ್ಲ. ಆರ್ಜಿದಾರರ ನನ್ನ ಮುಂದೆ ಅರೋಪಿತರ ವಿರುದ್ದ ಯಾವುದೇ ಅರೋಪಗಳನ್ನು ಮಾಡಿಲ್ಲ. ಸದರಿ ಅರೋಪಿತರ ವಿರುದ್ದ ಯಾವುದೇ ದೂರುಗಳನ್ನು ನಾನು ಪಡೆದುಕೊಂಡಿಲ್ಲ ಮತ್ತು ಯಾರು ಬಂದು ದೂರು ಕೊಟ್ಟಿಲ್ಲ.

**ಮರುವಿಚಾರಣೆಃ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).***

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

*(ನಿಂಗಪ್ಪ ಪರಶುರಾಮ ಕೋಪರ್ಡೆ)*
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

***(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)***

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ :</u>**